ಇ) ಹೊಸದಾಗಿ ಟ್ಯಾಂಕ್‌ನ್ನು ನಿರ್ಮಾಣ ಮಾಡಿದ ಗುತ್ತಿಗೆದಾರರು ಮೆ:ಶ್ರೀ ಸುಭಾ ಸೇಲ್ಸ್, ಬೆಂಗಳೂರು.

ಈ) ಮತ್ತು ಉ) ಹೌದು.

ಕಾಮಗಾರಿಗೆ ರೂ.113.50 ಲಕ್ಷಗಳ ಅಂದಾಜಿಗೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಆದೇಶ ಸಂಖ್ಯೆ: ಪೌನಿ/ತಾಂತ್ರಿಕ/ಕು.ನಿ/ ಕಾರ್ಕಳ/21/2008–09 ದಿನಾಂಕ: 8.7.2008 ರಲ್ಲಿ ಅನುಮೋದನೆ ನೀಡಲಾಗಿದೆ. ಆದರೆ ಸ್ಥಳಕ್ಕೆ ಅನುಗುಣವಾಗಿ ವಿನ್ಯಾಸವನ್ನು ಮಾರ್ಪಡಿಸಿರುವುದರಿಂದ ಟ್ಯಾಂಕಿನ ಅಡಿಪಾಯದಲ್ಲಿ ಕೆಲವು ಹೆಚ್ಚುವರಿ ಕಾಮಗಾರಿಗಳನ್ನು ಕೈಗೊಂಡ ಪ್ರಯುಕ್ತ ಅಂದಾಜು ಮೊತ್ತವು ಪರಿಷ್ಕೃತಗೊಂಡಿರುತ್ತದೆ.

ರಾಜ್ಯ ಪೊಲೀಸ್ ಶ್ವಾನದಳದ ವ್ಯವಸ್ಥೆಯ ಅಭಿವೃದ್ಧಿ

(461) 141 ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪೊಲೀಸ್ ಇಲಾಖೆಯಲ್ಲಿನ ಶ್ವಾನದಳದ ಬಲ ಸಂವರ್ಧನೆಗಾಗಿ ಸರ್ಕಾರದ ಕ್ರಮಗಳೇನು?

ಆ) ತನಿಖೆ ಮತ್ತು ಅಪರಾಧಗಳ ಪತ್ತೆ ಹಚ್ಚುವ ಕಾರ್ಯದಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸುವ ಶ್ವಾನದಳದ ಸೌಲಭ್ಯವನ್ನು ಎಲ್ಲ ಜಿಲ್ಲೆಗಳಿಗೂ ಒದಗಿಸಿಕೊಡಲಾಗಿದೆಯೇ? ಇಲ್ಲವಾದಲ್ಲಿ ಇದಕ್ಕೆ ಕಾರಣಗಳೇನು?

ಇ) ಉಗ್ರಗಾಮಿ ಚಟುವಟಿಕೆಗಳು, ಅಪರಾಧ ಪ್ರಕರಣಗಳಲ್ಲಿನ ಹೆಚ್ಚಳ, ಭೂಗತ ಚಟುವಟಿಕೆಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಶ್ವಾನದಳವನ್ನು ಸುಸಜ್ಜಿತ ಮತ್ತು ವೈಜ್ಞಾನಿಕ ರೀತ್ಯಾ ಬಲ ಪಡಿಸಲು ಸರ್ಕಾರದ ನಿಲುವುಗಳೇನು? (ಮಾಹಿತಿ ನೀಡುವುದು).

ಡಾ॥ ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಪ್ರಸ್ತುತ ಪೊಲೀಸ್ ಇಲಾಖೆಯಲ್ಲಿ ಒಟ್ಟು 148 ಶ್ವಾನಗಳ ಮಂಜೂರಾತಿ ಬಲವಿರುತ್ತದೆ. ಸದ್ಯ 124 ವಾಸ್ತವಿಕ ಬಲವಿದ್ದು, 24 ರಿಕ್ತಸ್ಥಾನಗಳಿರುತ್ತದೆ. ಖಾಲಿ ಇರುವ ಸ್ಥಾನಗಳನ್ನು ತುಂಬಲು ಘಟಕಾಧಿಕಾರಿಗಳ ಕೋರಿಕೆಯ ಮೇರೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/72/ಇಎಫ್‌ಎಸ್/09, ದಿನಾಂಕ: 25/08/2009 ರಲ್ಲಿ ಶ್ವಾನಗಳನ್ನು ಖರೀದಿಸಲು ಇಲಾಖಾ ಮುಖ್ಯಸ್ಥರಿಗೆ ಈ ಹಿಂದೆ ಇದ್ದ ರೂ.5,000/– ಗಳ ವಿತ್ತಾಧಿಕಾರವನ್ನು ರೂ.10,000/– ಗಳಿಗೆ ಹೆಚ್ಚಿಸಿದ್ದು, ಈ ಕ್ರಮದಿಂದ ರಾಜ್ಯ ಪೊಲೀಸ್ ಇಲಾಖೆಗೆ ಅತ್ಯುತ್ತಮ ತಳಿಯ ಶ್ವಾನಗಳನ್ನು ಖರೀದಿಸಲು ಅವಕಾಶ ಮಾಡಲಾಗಿರುತ್ತದೆ.

ಆ) ಹೊಸದಾಗಿ ಸೃಜನೆಯಾಗಿರುವ ಚಿಕ್ಕಬಳ್ಳಾಪುರ, ರಾಮನಗರ ಮತ್ತು ಯಾದಗಿರಿ ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ನಗರ ಹಾಗೂ ಜಿಲ್ಲಾ ಪೊಲೀಸ್ ಘಟಕಗಳಿಗೆ ಶ್ವಾನದಳದ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಹೊಸದಾಗಿ ಸೃಜಿಸಲಾಗಿರುವ ಜಿಲ್ಲಾ ಘಟಕಗಳಿಗೆ ಅವರ ಕೋರಿಕೆಗನುಗುಣವಾಗಿ ಶ್ವಾನಬಲ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಶ್ವಾನದಳವನ್ನು ಸುಸಜ್ಜಿತ ಹಾಗೂ ವೈಜ್ಞಾನಿಕ ರೀತಿಯಲ್ಲಿ ಬಲಪಡಿಸುವ ನಿಟ್ಟಿನಲ್ಲಿ ಅವುಗಳಿಗೆ ಪ್ರತ್ಯೇಕ "ಕೆನಲ್" ವ್ಯವಸ್ಥೆ, ಅಪರಾಧ ನಡೆದ ಸ್ಥಳಗಳಿಗೆ ಶ್ವಾನಗಳನ್ನು ಕೊಂಡೊಯ್ಯಲು ಪ್ರತ್ಯೇಕ ವಾಹನ ವ್ಯವಸ್ಥೆ ಹಾಗೂ ಪೌಷ್ಟಿಕಾಂಶಗಳನ್ನು ಒಳಗೊಂಡ ಆಹಾರಗಳನ್ನು ಕಾಲಕಾಲಕ್ಕೆ ನೀಡುತ್ತಿದ್ದು, ಪಶು ವೈದ್ಯರ ಸಲಹೆಯಂತೆ ಮೇಲಿಂದ ಮೇಲೆ ಅವುಗಳ ಆರೋಗ್ಯ ತಪಾಸಣೆ, ಶುಶ್ರೂಷೆ ಇತ್ಯಾದಿ ಕಾರ್ಯಗಳನ್ನು ಮುತುವರ್ಜಿ ವಹಿಸಿ ನಿರ್ವಹಿಸಲಾಗುತ್ತಿದೆ. ಅಂತೆಯೇ ಶ್ವಾನವೊಂದನ್ನು ದಿನವೊಂದಕ್ಕೆ ನಿಗಧಿಪಡಿಸಿರುವ ರೂ.70/–ಗಳ ಆಹಾರ ಭತ್ಯೆಯನ್ನು ರೂ. 177/–ಕ್ಕೆ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆ ಯಲ್ಲಿರುತ್ತದೆ.

ಶ್ವಾನದಳದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಮಧ್ಯಪ್ರದೇಶದಲ್ಲಿರುವ ಬಿಎಸ್‌ಎಫ್ ಕೇಂದ್ರದ ರಾಷ್ಟ್ರೀಯ ಶ್ವಾನದಳದ ತರಬೇತಿ ಕೇಂದ್ರದಲ್ಲಿ ಒಂದು ವರ್ಷದ ತರಬೇತಿ ಶಿಬಿರಗಳಿಗೆ ನಿಯೋಜಿಸಿ ಅವರು ಹೆಚ್ಚಿನ ಪರಿಣಿತಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.

ಅಪರಾಧ, ಸ್ಫೋಟಕ ಪ್ರಕರಣಗಳಲ್ಲಿ ಮತ್ತು ಮಾದಕ ವಸ್ತುಗಳನ್ನು ಶೋಧನೆ ಮಾಡಲು ಶ್ವಾನಗಳಿಗೆ ವೈಜ್ಞಾನಿಕವಾಗಿ ಆಧುನಿಕ ತರಬೇತಿ ನೀಡಲು ಸಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.